ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 16 : 63

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ಉತ್ತರಿಸುವ ಸಚಿವರು : ಶ್ರೀ ಗೋವಿಂದ ಕಾಳಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಪ್ರಾದೇಶಿಕ ಅಸಮತೋಲನದ ನಿವಾರಣೆಯ ಸಲುವಾಗಿ ಡಾ|| ಡಿ. ಎಂ. ನಂಜುಂಡಪ್ಪನವರ ನೇತೃತ್ವದ ಸಮಿತಿಯು ಸರ್ಕಾರಕ್ಕೆ ನೀಡಿರುವ ವರದಿಯನ್ವಯ ಯಾವ ಯಾವ ತಾಲ್ಲೂಕುಗಳನ್ನು ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸ ಲಾಗಿದೆ;	ಒಟ್ಟು 114 ತಾಲ್ಲೂಕುಗಳು ಹಿಂದುಳಿದವು ಎಂದು ಗುರುತಿಸಲಾಗಿದ್ದು ಇವುಗಳ ಪೈಕಿ 39 ಅತ್ಯಂತ ಹಿಂದುಳಿದವು. 40 ಅತೀ ಹಿಂದುಳಿದವು ಹಾಗೂ 35 ಹಿಂದುಳಿದವು ಎಂದು ಗುರುತಿಸಲಾಗಿದೆ. ಇವುಗಳ ಪಟ್ಟಿಯನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.
ಆ.	ಈ ತಾಲ್ಲೂಕುಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಇದಕ್ಕಾಗಿ ಕಳೆದ 2 ಆಯವ್ಯಯದಲ್ಲಿ ಮೀಸಲಿಟ್ಟ ಹಣ ಹಾಗೂ ಬಿಡುಗಡೆಗೊಳಿಸಿದ ಹಣವೆಷ್ಟು; (ಆಯವ್ಯಯದಲ್ಲಿ ಒದಗಿಸಿರುವ ಹಣದ ವರ್ಷವಾರು ಅಂಕಿ ಅಂಶಗಳ ಪೂರ್ಣ ವಿವರಗಳನ್ನು ಒದಗಿಸುವುದು)	ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆಗಳ ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹಣ ಒದಗಿಸಿದ್ದಲ್ಲದೆ 2007-08ರಿಂದ 2014-15ರ ವರೆಗೆ 8 ವರ್ಷಗಳ ಒಂದು ವಿಶೇಷ ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆಯಡಿ 30725 ಕೋಟಿ ರೂ.ಗಳನ್ನು ವಿವಿಧ ಅಭಿವೃದ್ಧಿ ವಲಯಗಳಿಗೆ ರಾಜ್ಯದ ಹಿಂದುಳಿದ ಪ್ರದೇಶಗಳ / ತಾಲ್ಲೂಕುಗಳಲ್ಲಿ ಬಂಡವಾಳ ಹೂಡಲು ಉದ್ದೇಶಿಸಲಾಗಿದೆ. 2007-08ನೇ ಆಯವ್ಯಯದಲ್ಲಿ 1571.50 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇಲಾಖಾವಾರು ವಿವರಗಳನ್ನು ಅನುಬಂಧ 2ರಲ್ಲಿ ನೀಡಲಾಗಿದೆ.

		2008-09ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಅಡಿ 2547.34 ಕೋಟಿ ರೂ.ಗಳ ಹಣವನ್ನು ವಿವಿಧ ಇಲಾಖೆಗಳಿಂದ ಮೀಸಲಿಡಲಾಗಿದೆ.
ಇ.	ಈ ವರದಿಯ ಅನ್ವಯ ಬೀದರ್ ವಿಧಾನ ಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಯಾವ ಯಾವ ಶಿಫಾರಸ್ಸುಗಳನ್ನು ಮಾಡಲಾಗಿದೆ? (ಇಲಾಖಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)	ಬೀದರ್‌ಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಮಿತಿಯ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದೆ. 1. ಬೀದರ್‌ನಲ್ಲಿ ಪಶುಸಂಗೋಪನಾ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು. 2. ಸಾರ್ವಜನಿಕ ವಲಯದಲ್ಲಿ ಒಂದು ಸಾಮೂಹಿಕ ಕಲ್ಮಶ ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸುವುದು. 3. ಈಗಾಗಲೇ ಇರುವ ವಿಮಾನ ನಿಲ್ದಾಣವನ್ನು ವಾಯುಪಡೆ ಪ್ರಾಧಿಕಾರದ ಸಮಾಲೋಚನೆಯೊಂದಿಗೆ ಪ್ರವಾಸೋದ್ಯಮಕ್ಕೆ ಉಪಯೋಗಿಸಿಕೊಳ್ಳುವುದು.
ಈ.	ಇದರ ಅನ್ವಯ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆಯೆ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು;	
ಉ.	ಈ ಸಂಬಂಧ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳು ಜಾರಿಯಲ್ಲಿವೆ;	ಸರ್ಕಾರವು ಈಗಾಗಲೇ ಬೀದರ್‌ನಲ್ಲಿ ಪಶುಸಂಗೋಪನಾ ವಿಶ್ವವಿದ್ಯಾನಿಲಯವನ್ನು 2004-05ರಲ್ಲಿ ಸ್ಥಾಪಿಸಿದೆ. ಇದಲ್ಲದೆ ಈ ತಾಲ್ಲೂಕಿನ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಲ್ಲಿ 2007-08ರ ಸಾಲಿನಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಇಲಾಖೆಯಿಂದ ಬೀದರ್ ಗುಲ್ಬರ್ಗ ರೈಲು ಮಾರ್ಗಕ್ಕೆ 20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬೀದರ್ ಸಣ್ಣ ವಿಮಾನ ನಿಲ್ದಾಣದ ಅಭಿವೃದ್ಧಿಗೆ 2 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಬೀದರ್

		ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು 4 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಬೀದರ್ ತಾಲ್ಲೂಕಿಗೆ ವಿವಿಧ ಇಲಾಖೆಗಳ ರಾಜ್ಯ ಯೋಜನಾ ಕಾರ್ಯಕ್ರಮಗಳಿಂದ ಮತ್ತು ಜಿಲ್ಲಾ ವಲಯ ಯೋಜನೆಗಳಿಂದ ಹಣವನ್ನು ಬಿಡುಗಡೆ ಮಾಡಲಾಗಿದೆ.
ಊ. ಋ.	ಸಮಿತಿಯ ಶಿಫಾರಸ್ಸುಗಳನ್ನು ಸಮಗ್ರವಾಗಿ ಕಾರ್ಯಗತಗೊಳಿಸಲು ಅಗತ್ಯವಿರುವ ಹಣದ ಮೊತ್ತ ವೆಷ್ಟು; ಈ ಹಣವನ್ನು ಯಾವ ಮೂಲಗಳಿಂದ ಭರಿಸಲಾಗುವುದು. ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ;	ಉನ್ನತ ಮಟ್ಟದ ಸಮಿತಿಯು 8 ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗೆ 30725 ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಶಿಫಾರಸ್ಸು ಮಾಡಿದೆ. ಈ ವಿಶೇಷ ಅಭಿವೃದ್ಧಿ ಯೋಜನೆಗೆ ಬೇಕಾದ ಹಣವನ್ನು ರಾಜ್ಯ ಆಯವ್ಯಯದಿಂದ (ಅನುದಾನ) ಹೆಚ್ಚುವರಿ ಆಯವ್ಯಯ ಸಂಪನ್ಮೂಲ (ಸಾಲ ಹಾಗೂ ವಿದೇಶಿ ನೆರವಿನಿಂದ) ಭರಿಸಲಾಗುವುದು.

ಅನುಬಂಧ - 1

ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತಾಧಿಕಾರ ಸಮಿತಿಯು ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳ ಪಟ್ಟಿ

ಜಿಲ್ಲೆ	ಅತ್ಯಂತ ಹಿಂದುಳಿದ ತಾಲ್ಲೂಕು	ಅತಿ ಹಿಂದುಳಿದ ತಾಲ್ಲೂಕು	ಹಿಂದುಳಿದ ತಾಲ್ಲೂಕು
ಬಳ್ಳಾರಿ	ಸಂಡೂರು ಕೂಡ್ಲಗಿ	ಸಿರಗುಪ್ಪಾ ಹಗರಿಬೊಮ್ಮನಹಳ್ಳಿ ಹಡಗಲಿ	
ಬೀದರ್	ಭಾಲ್ಕಿ ಹುಮ್ನಾಬಾದ್ ಔರಾದ್ ಬಸವಕಲ್ಯಾಣ		
ಗುಲ್ಬರ್ಗಾ	ಸೇಡಮ್ ಸುರಪುರ ಯಾದಗೀರ ಚಿತಾಪುರ್ ಅಫ್‌ಜಲ್‌ಪುರ ಶಹಾಪುರ ಆಳಂದ ಚಿಂಚೋಳಿ ಚೇವರ್ಗಿ		ಗುಲ್ಬರ್ಗಾ
ಕೊಪ್ಪಳ	ಕುಷ್ಟಗಿ ಯಲಬುರ್ಗಾ	ಕೊಪ್ಪಳ	ಗಂಗಾವತಿ
ರಾಯಚೂರು	ಸಿಂಧನೂರ ಮಾನ್ವಿ ಲಿಂಗಸಗೂರ ದೇವದುರ್ಗ	ರಾಯಚೂರು	

ಬಾಗಲಕೋಟೆ	ಬೀಳಗಿ	ಹುನಗುಂದ ಬಾದಾಮಿ	
ಬೆಳಗಾಂ		ಅಥಣಿ ಗೋಕಾಕ ಸವದತ್ತಿ	ರಾಯಬಾಗ ಬೈಲಹೊಂಗಲ ರಾಮದುರ್ಗ ಹುಕ್ಕೇರಿ
ಬಿಜಾಪುರ	ಮುದ್ದೇಬಿಹಾಳ ಬಿ. ಬಾಗೇವಾಡಿ ಇಂಡಿ ಸಿಂಧಗಿ		ಬಿಜಾಪುರ
ಧಾರವಾಡ		ಕಲಘಟಗಿ	ನವಲಗುಂದ ಕುಂದಗೋಳ
ಗದಗ		ಮುಂಡರಗಿ	ರೋಣ ಶಿರಹಟ್ಟಿ
ಹಾವೇರಿ		ಸವಣೂರ ಶಿಗ್ಗಾಂವ್ ಹಿರೇಕೆರೂರು	ಹಾವೇರಿ ಬ್ಯಾಡಗಿ ಹಾನಗಲ್
ಉತ್ತರ ಕನ್ನಡ		ಸುಪಾ (ಜೋಯ್ಡಾ) ಭಟ್ಕಳ	ಅಂಕೋಲಾ ಸಿದ್ಧಾಪುರ
ಬೆಂಗಳೂರು (ನ)			ಆನೇಕಲ್
ಬೆಂಗಳೂರು (ಗ್ರಾ)	ಕನಕಪುರ ಮಾಗಡಿ		ಹೊಸಕೋಟೆ ಚನ್ನಪಟ್ಟಣ
ಚಿತ್ರದುರ್ಗ	ಹೊಸದುರ್ಗ	ಹಿರಿಯೂರು ಮೊಳಕಾಲ್ಮೂರು ಹೊಳಲ್ಕೆರೆ ಚಳ್ಳಕೆರೆ	

ದಾವಣಗೆರೆ	ಚನ್ನಗಿರಿ ಹರಪನಹಳ್ಳಿ	ಹೊನ್ನಳ್ಳಿ ಜಗಳೂರು	
ಕೋಲಾರ	ಬಾಗೇಪಲ್ಲಿ	ಮುಳಬಾಗಿಲು ಗುಡಿಬಂಡೆ ಗೌರಿಬಿದನೂರು	ಶ್ರೀನಿವಾಸಪುರ ಚಿಂತಾಮಣಿ ಬಂಗಾರಪೇಟೆ ಮಾಲೂರು ಶಿಡ್ಲಘಟ್ಟ
ಶಿವಮೊಗ್ಗ		ಸೊರಬ	ಶಿಕಾರಿಪುರ
ತುಮಕೂರು	ತುಮಕೂರು ಮಧುಗಿರಿ ಗುಬ್ಬಿ ಸಿರಾ ಪಾವಗಡ	ತುರುವೇಕೆರೆ ಕೊರಟಗೆರೆ ಸಿ.ಎನ್. ಹಳ್ಳಿ	
ಚಾಮರಾಜನಗರ	ಚಾಮರಾಜನಗರ	ಗುಂಡ್ಲುಪೇಟೆ ಕೊಳ್ಳೇಗಾಲ	
ಚಿಕ್ಕಮಗಳೂರು		ಕಡೂರು	ತರೀಕೆರೆ
ಹಾಸನ		ಅರಕಲಗೂಡು	ಹೊಳೆನರಸೀಪುರ ಬೇಲೂರು ಚನ್ನರಾಯಪಟ್ಟಣ ಅರಸೀಕೆರೆ
ಮಂಡ್ಯ		ಮಳವಳ್ಳಿ ನಾಗಮಂಗಲ ಕೆ.ಆರ್.ಪೇಟ್	ಶ್ರೀರಂಗಪಟ್ಟಣ ಮದ್ದೂರು ಪಾಂಡವಪುರ
ಮೈಸೂರು	ಹೆಚ್.ಡಿ.ಕೋಟೆ	ಹುಣಸೂರು ಟಿ. ನರಸೀಪುರ ನಂಜನಗೂಡು	ಪಿರಿಯಾಪಟ್ಟಣ ಕೆ.ಆರ್.ನಗರ
ಒಟ್ಟು	**39 ತಾಲ್ಲೂಕುಗಳು**	**40 ತಾಲ್ಲೂಕುಗಳು**	**35 ತಾಲ್ಲೂಕುಗಳು**

ಅನುಬಂಧ - 2

2007- 08ರ ವಿಶೇಷ ಅಭಿವೃದ್ಧಿ ಯೋಜನೆಗಳಡಿ ವಿಭಾಗವಾರು ಒದಗಿಸಿರುವ ಅನುದಾನ ಮತ್ತು ವೆಚ್ಚದ ವಿವರಗಳು

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ವಿಭಾಗ / ಕಾರ್ಯಕ್ರಮ	2007-08ರಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ ಒದಗಿಸಿರುವ ಅನುದಾನ	ರೂ.ಕೋಟಿಗಳಲ್ಲಿ	
				ವೆಚ್ಚ#	ಶೇಕಡಾವಾರು ವೆಚ್ಚ
1	2	3	4	5	6
1	ಕೃಷಿ	ಕೃಷಿ, ರೇಷ್ಮೆ, ಮೀನುಗಾರಿಕೆ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂಬಂಧಪಟ್ಟ ಗ್ರಾಮೀಣ ಮೂಲ ಸೌಕರ್ಯಗಳು #	110.00	0.00	0.00
	a) ತೋಟಗಾರಿಕೆ	ತೋಟಗಾರಿಕೆ ವಿಶ್ವವಿದ್ಯಾಲಯ ಮತ್ತು ಕಾಲೇಜು, ಬೀದರ್.	14.00	14.00	100.00
	b) ಪಶುಸಂಗೋಪನೆ	ಉತ್ತರ ಕರ್ನಾಟಕ ಹಾಲು ಉತ್ಪಾದಕರ ಸಂಘ, ಹೊಸ ಪಶು ಸಂಗೋಪನ ಘಟಕಗಳ ತೆರೆಯುವಿಕೆ ಮತ್ತು ಪಶು ಚಿಕಿತ್ಸಾಲಯಗಳನ್ನು ಮತ್ತು ಡೈರಿ ವಿಜ್ಞಾನ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವುದು.	40.00	40.00	100.00
2	ಲೋಕೋಪಯೋಗಿ	ಗ್ರಾಮೀಣ ರಸ್ತೆಗಳು	125.00	98.23	78.58
3	ಗ್ರಾಮೀಣಾಭಿವೃದ್ಧಿ	ಗ್ರಾಮ ಸ್ವರಾಜ್ ಯೋಜನೆ	160.00	146.60	91.63
		ಗ್ರಾಮೀಣ ನೀರು ಸರಬರಾಜು#	90.00	0.00	0.00

4	ಗ್ರಾಮೀಣ ವಸತಿ	ಗ್ರಾಮೀಣ ವಸತಿ	100.00	100.00	100.00
5	ನೀರಾವರಿ	ಕೃಷ್ಣ ನೀರಾವರಿ ನಿಗಮ ನಿಯಮಿತ ಕಾಮಗಾರಿಗಳು	200.00	137.24	68.62
		ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ ಕಾಮಗಾರಿಗಳು	50.00	48.50	97.00
		ಕಾವೇರಿ ನೀರಾವರಿ ನಿಗಮ ನಿಯಮಿತ ಕಾಮಗಾರಿಗಳು	50.00	39.84	79.68
6	ಇಂಧನ	ಹಿಂದುಳಿದ ಪ್ರದೇಶಗಳಲ್ಲಿ ಇಂಧನ ಮೂಲಸೌಕರ್ಯಗಳು	250.00	85.67	34.27
7	ಕೈಗಾರಿಕೆ	ಕೈಗಾರಿಕಾ ವಿಕಾಸ ಮತ್ತು ಕಾರ್ಮೆಂಟ್ ವಿಭಾಗದಲ್ಲಿ ಉದ್ಯೋಗ ಸೃಷ್ಟಿ	55.00	5.69	10.35
8	ಸಾರಿಗೆ	NEKRTC, NWKRTC KSRTC ಗಳಿಗೆ ಮೂಲಭೂತ ಸೌಕರ್ಯಗಳಿಗಾಗಿ ಸಹಾಯ	100.00	100.00	100.00
9	ಮೂಲಸೌಲಭ್ಯ ಅಭಿವೃದ್ಧಿ	ಗದಗ ಶೋಲಾಪುರ ರೈಲ್ವೆ ಮಾರ್ಗಗಳು	8.00	8.00	100.00
		ಬೀದರ್‌ಗುಲ್ಬರ್ಗಾ ರೈಲ್ವೆ ಮಾರ್ಗಗಳು	20.00	20.00	100.00
		ಬಿಜಾಪುರ, ಬೆಳಗಾಂ, ಬೀದರ್, ಗುಲ್ಬರ್ಗಾ ಮತ್ತು ಹುಬ್ಬಳ್ಳಿಗಳಲ್ಲಿ ಸಣ್ಣ ವಿಮಾನ ನಿಲ್ದಾಣಗಳು	19.50	19.50	100.00

10	ಸಾಮಾಜಿಕ ಸೇವೆಗಳು				
	a) ಆರೋಗ್ಯ	ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೇಲ್ದರ್ಜೆ	20.00	20.00	100.00
	b) ಶಿಕ್ಷಣ	ಹೊಸ ಪ್ರೌಢಶಾಲೆಗಳು ಮತ್ತು ಕಾಲೇಜುಗಳು #	100.00	0.00	0.00
	c) ಸಮಾಜ ಕಲ್ಯಾಣ	ಗಂಗಾ ಕಲ್ಯಾಣ ಕೊಳವೆ ಬಾವಿಗಳ ವಿದ್ಯುದೀಕರಣ	50.00	50.00	100.00
	d) ಕಾರ್ಮಿಕ	ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳು #	10.00	0.00	0.00
			1571.50	**933.27**	**59.39**
# 2008-09ನೇ ಸಾಲಿನ ಮುಂದುವರೆದ ವೆಚ್ಚವೂ ಒಳಗೊಂಡಿದೆ.					

ಸೂಚನೆ 1 : ವಿಶೇಷ ಅಭಿವೃದ್ಧಿ ಕಾರ್ಯಕ್ರಮಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯ ದಸ್ತಾವೇಜಿನಲ್ಲಿನ ಅನುದಾನಕ್ಕೂ / ಆಯವ್ಯಯ ಭಾಷಣದಲ್ಲಿ ಅನುದಾನಕ್ಕೂ ಮತ್ತು ಲೆಕ್ಕ ಶೀರ್ಷಿಕೆಗಳಡಿ ನಮೂದಿಸಿರುವ ಅನುದಾನಕ್ಕೂ ವ್ಯತ್ಯಾಸವಿರುತ್ತದೆ. ಈ ರೀತಿ ಹೆಚ್ಚುವರಿಯಾಗಿರುವ ವೆಚ್ಚವನ್ನು ಯಥಾಪ್ರಕಾರದ ಆಯವ್ಯಯದ ಭಾಗವೆಂದು ಭಾವಿಸಲಾಗಿದೆ.

ಸೂಚನೆ 2 : ನಮೂದಿಸಲಾಗಿರುವ ವೆಚ್ಚವು ರೂ.1571.50 ಕೋಟಿಗೆ ಸಂಬಂಧಿಸಿದೆ. ಆದಾಗ್ಯೂ ಕೆಲವೊಂದು ಇಲಾಖೆಗಳು ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಒದಗಿಸಲಾಗಿರುವ ಅನುದಾನಕ್ಕಿಂತ ಹೆಚ್ಚು ಅನುದಾನವನ್ನು ಉಪಯೋಗಿಸಲಾಗಿದೆಯೆಂದು ವರದಿ ಮಾಡಲಾಗಿದೆ. ಈ ವೆಚ್ಚವನ್ನು ಗಣನೆಗೆ ತೆಗೆದುಕೊಂಡರೆ ವೆಚ್ಚವು ರೂ.316.78 ಕೋಟಿಗಳಷ್ಟು ಹೆಚ್ಚಾಗಿರುತ್ತದೆ. ಈ ಹೆಚ್ಚುವರಿ ವೆಚ್ಚದಲ್ಲಿ ರೂ.300 ಕೋಟಿ ವಸತಿ ಇಲಾಖೆಗೆ, ರೂ.5.13 ಕೋಟಿ ಪಶು ಸಂಗೋಪನೆಗೆ, ರೂ.8.00 ಕೋಟಿ ಮೂಲಭೂತ ಅಭಿವೃದ್ಧಿಗೆ ಹಾಗೂ ರೂ. 3.65 ಕೋಟಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದೆ.